The Hon'ble Sri K. CHENGALARAYA REDDY.—We are expecting that. That is exactly what we have been urging the Government to do and I have already answered that I feel convinced as a result of our efforts that early orders are expected to be issued by the Government of India exempting Mysore from the operation of article 371.

Janab MOHAMED HANIEF.—Is it a matter of concession that we are seeking or are we asking as a matter of right that we should be put out of the purview of article 371?

The Hon'ble Sri K. CHENGALARAYA REDDY.—It is a just cause on our part that we are putting forward. There is no question of concession involved in it.

Janab MOHAMED HANIEF.—Does not the application of article 371 mean interfering with the day to day administration of the State?

The Hon'ble Sri K. CHENGALARAYA REDDY.—So far there have been no instances of interference with the day to day administration of the Government excepting the one about which the directive was issued recently in regard to the transfer of a case.

Janab MOHAMED HANIEF.—Does not the present case come under the heading 'day to day administration'?

The Hon'ble Sri K. CHENGALARAYA REDDY.—That is a matter of opinion.

Sri K. R. SREEKANTESWAR (Bangalore City—General).—Have this Government impressed on the Central Government the necessity also of retaining article 371 of the Constitution?

Mr. SPEAKER.—That supplementary does not arise.

Sri K. R. SREEKANTESWAR.—May I know whether the Mysore Government made use of this article 371 in connection with the retirement of one of the High Court Judges?

The Hon'ble Sri K. CHENGALARAYA REDDY.—No, no.

Sri S. RANGARAMIAH (Mysore District—General).—Has the Travancore-Cochin Union also made an attempt to get that benefit of exemption? ... ...

The Hon'ble Sri K. CHENGALARAYA REDDY.—I cannot say with regard to the Travancore-Cochin Union. I do not know what they have done and what they have not done.

SHORT NOTICE QUESTIONS AND ANSWERS.

Basis for assignment of different classes for existing roads in Mysore.

Q.—29. **Sri T. MADIAH GOWDA** (Bangalore District—General).—

Will the Government be pleased to state:

(*a*) whether it is a fact that the list classifying the roads in Mysore is printed and issued just about a week back;

(*b*) the considerations that weighed for assigning different classes for existing roads;

(*c*) the persons that were consulted in the matter;

(*d*) how many miles of I.V.C. roads and of District Board roads in Bangalore District are included in III and IV classes?

A.—**The Hon'ble Sri T. MARIAPPA** (Home Minister).—

(*a*) Printed copies were issued on 18th October 1951.

(*b*) Given in G.O No. P.W. 4262-4383—R. & B. 6-50 58, dated 8th August 1951 (copies already furnished to the Assembly).

(*c*) Sub-committee for each district consisting of the Deputy Commissioner, the President, District Board, and the Executive Engineer, was consulted by

(THE HON'BLE SRI T. MARIAPPA.)

the roads reclassification main committee.

(*d*)

Roads	*Class III* M.	F.	*Class IV* M.	F.
I.V.C. Roads			221 (approximately).	0
District Board Roads.	430	3½	238	3

ಶ್ರೀ ಟಿ. ಮಾದಯ್ಯಗೌಡರು.—ಈ ರಸ್ತೆಗಳ ಪರಿವರ್ತನೆಯ ಬಗ್ಗೆ ಯಾವ ಯಾವ ದರ್ಜೆಯ ರಸ್ತೆಗೆ ಎಷ್ಟೆಷ್ಟು ಮೊಬಲಗನ್ನು ಸರ್ಕಾರದವರು ಒದಗಿಸಿದ್ದಾರೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ದಯವಿಟ್ಟು ತಾವು ಗವರ್ನ್‌ಮೆಂಟ್ ಆರ್ಡರನ್ನು ನೋಡಿ. ಅದರಲ್ಲಿ ವಿಶದವಾಗಿ ಎಲ್ಲವನ್ನು ಕೊಟ್ಟಿರುತ್ತೆ. First class ರಸ್ತೆಗಳಿಗೆ 750 ರೂಪಾಯಿ, 2ನೆಯ ದರ್ಜೆ ರಸ್ತೆಗೆ 500 ರೂಪಾಯಿ, 3ನೆಯ ದರ್ಜೆ ರಸ್ತೆಗೆ 200 ರಿಂದ 100 ರೂಪಾಯಿಗಳ ವರೆಗೂ ಮತ್ತು 4ನೆಯ ದರ್ಜೆ ರಸ್ತೆಗೆ ಒಂದು ನೂರು ರೂಪಾಯಿಗಳೆಂದು, ನಿರ್ಧರಮಾಡಿದ್ದೇವೆ. ಈ ರಸ್ತೆಗಳ ಪರಿವರ್ತನೆಯ ಬಗ್ಗೆ ಸಂಬಂಧಪಟ್ಟ ಎಲ್ಲಾ ಸಮಿತಿಗಳ ಸಲಹೆಯನ್ನು ಪಡೆದು ಹೀಗೆ ನಿರ್ಧರ ಮಾಡಲಾಗಿದೆ.

ಶ್ರೀ ಟಿ. ಮಾದಯ್ಯಗೌಡರು.—ನಾಲ್ಕನೆಯ ಕ್ಲಾಸ್ ರಸ್ತೆಗೆ ಯಾವ ರಸ್ತೆಗಳನ್ನು ಸೇರಿಸಲಾಗಿದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸಾಮಾನ್ಯವಾಗಿ 50—60 ರೂಪಾಯಿಗಳ ಗ್ರಾಂಟಿರುವ ಕೆಲವು ಜಿಲ್ಲಾ ಬೋರ್ಡು ರಸ್ತೆಗಳು ಮತ್ತು ಏನೂ ಗ್ರಾಂಟಿಲ್ಲದಿರುವ ಐ. ವಿ. ಸಿ. ರಸ್ತೆಗಳು ಸೇರಿಸಲ್ಪಟ್ಟಿವೆ.

ಶ್ರೀ ಟಿ. ಮಾದಯ್ಯಗೌಡರು.—ಮೊದಲು 50 ರೂಪಾಯಿನೊಳಗೆ ಗ್ರಾಂಟಿದ್ದ ಕೆಲವು ಜಿಲ್ಲಾ ಬೋರ್ಡು ರಸ್ತೆಗಳನ್ನು ನಾಲ್ಕನೆಯ ಕ್ಲಾಸಿನಲ್ಲೇ ಇಟ್ಟಿದ್ದೀರಾ ಅಥವಾ ಮೂರನೆಯ ಕ್ಲಾಸಿಗೆ ಅಥವಾ 2ನೆಯ ಕ್ಲಾಸಿಗೆ ವರ್ಗಾಯಿಸಲು ಪ್ರಯತ್ನಮಾಡಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸಾಮಾನ್ಯವಾಗಿ ಹೆಚ್ಚು ಟ್ರಾಫಿಕ್ ಇದ್ದು ಮುಖ್ಯವಾಗಿ ಗ್ರಾಮಗಳಿಗೆ ಬೇಕಾಗಿವೆಯೋ ಆ ರಸ್ತೆಗಳನ್ನು ಎರಡನೆಯ ಕ್ಲಾಸಿಗೆ ವರ್ಗಾಯಿಸಿದೆ.

ಶ್ರೀ ಟಿ. ಮಾದಯ್ಯಗೌಡರು.—ನಾಲ್ಕನೆಯ ಕ್ಲಾಸು, ಕಡೇ ಕ್ಲಾಸು, 50 ರೂಪಾಯಿ ಗ್ರಾಂಟಿದ್ದು ಜಿಲ್ಲಾ ಬೋರ್ಡಿನ ರಸ್ತೆಯಾಗಿದ್ದು ಅಲ್ಲಿ ಹೆಚ್ಚು ಟ್ರಾಫಿಕ್ ಇದ್ದರೆ ಅದನ್ನು ಎರಡನೆಯ ಅಥವಾ ಮೂರನೆಯ ಕ್ಲಾಸಿಗೆ ವರ್ಗಾಯಿಸಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು, ಎಷ್ಟೋ ರಸ್ತೆಗಳನ್ನು ವರ್ಗಾಯಿಸಿದೆ.

ಶ್ರೀ ಟಿ. ಮಾದಯ್ಯಗೌಡರು.—ಹಾಗೆ ಬೆಂಗಳೂರು ಜಿಲ್ಲೆಯಲ್ಲಿ ಯಾವುದಾದರೂ ರಸ್ತೆಯನ್ನು ಎರಡು ಅಥವಾ ಮೂರನೆಯ ಕ್ಲಾಸಿಗೆ ವರ್ಗಾಯಿಸಿರುವುದು ಸರ್ಕಾರಕ್ಕೆ ಗೊತ್ತೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು, ಜಿಲ್ಲಾ ಬೋರ್ಡು ರಸ್ತೆಗಳನ್ನು ಮೂರನೆಯ ಕ್ಲಾಸಿಗೆ ಹಾಕಿದೆ.

ಶ್ರೀ ಟಿ. ಮಾದಯ್ಯಗೌಡರು.—ಅದು ಮೊದಲು 'ಎ' ಕ್ಲಾಸು ರಸ್ತೆಗೆ ಸೇರಿರಲಿಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ. ಅದರಲ್ಲಿ 60, 70, 100 ಹೀಗೆಲ್ಲಾ ಗ್ರಾಂಟು ಪಡೆಯುತ್ತಿದ್ದುದನ್ನು ಮೂರನೆಯ ಕ್ಲಾಸು ಮಾಡಿದೆ.

ಶ್ರೀ ಟಿ. ಮಾದಯ್ಯಗೌಡರು.—ಮೊದಲಿನ 'ಎ' ಕ್ಲಾಸು ರಸ್ತೆಯಲ್ಲದೆ 'ಬಿ' ಕ್ಲಾಸು ರಸ್ತೆ ಯಾವುದನ್ನಾದರೂ ಮೂರನೆ ಅಥವಾ ಎರಡನೆಯ ಕ್ಲಾಸಿಗೆ ತೆಗೆದು ಕೊಂಡಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೆಲವು ರಸ್ತೆಗಳನ್ನು ಮೂರನೆಯ ಕ್ಲಾಸಿಗೆ ತೆಗೆದುಕೊಂಡಿದೆ.

ಶ್ರೀ ಟಿ. ಮಾದಯ್ಯಗೌಡರು.—ಇಂಟರ್‌ವಿಲೇಜ್ ರಸ್ತೆಯಲ್ಲಿ ಬೆಂಗಳೂರು ಜಿಲ್ಲೆಯಲ್ಲಿ ಎಷ್ಟು ಮೈಲಿಗಳನ್ನು 4—3 ಮತ್ತು 2ನೆಯ ಕ್ಲಾಸುಗಳಿಗೆ ತೆಗೆದು ಕೊಳ್ಳಬೇಕೆಂದು ನಿಯಾಮಕ ಮಾಡಿದ್ದೀರಿ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಾಗೆ ಮಾಡಿಲ್ಲ. ಐ. ವಿ. ಸಿ. ನಾಲ್ಕನೆಯ ಕ್ಲಾಸು ಬಿಟ್ಟಾ ಬೇರೆ ಮಾಡಿಲ್ಲ. ಅವಕ್ಕೆ ಗ್ರಾಂಟಿಲ್ಲದೆ ಇಲ್ಲಿಯವರೆಗೆ ಹಾಗೇ ಇವೆ. ಆದ್ದರಿಂದ ಆ ರಸ್ತೆ ತೆಗೆದುಕೊಂಡು ಟ್ರಾಫಿಕ್ ಉತ್ತಮವಾದ ಹೊರತು ಬೇರೆ ಕ್ಲಾಸುಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಐ. ವಿ. ಸಿ. ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆಗಳನ್ನು ನಾಲ್ಕನೆಯ ಕ್ಲಾಸು ಮಾಡಿದೆ.

ಶ್ರೀ ಟಿ. ಮಾದಯ್ಯಗೌಡರು.—ಬೆಂಗಳೂರು ಜಿಲ್ಲೆಯಲ್ಲಿರುವ ಎಲ್ಲಾ ಐ. ವಿ. ಸಿ. ರಸ್ತೆಗಳನ್ನೂ 4ನೆಯ ಕ್ಲಾಸಿನಲ್ಲೇ ಇಟ್ಟಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು. 221 ಮೈಲಿಯನ್ನೂ ಕೂಡ ಹಾಗೇ ಮಾಡಿದೆ.

ಶ್ರೀ ಟಿ. ಮಾದಯ್ಯಗೌಡರು.—221 ಮೈಲಿಯೆಂದು ಹೇಳುತ್ತೀರಿ. ಆದರೆ ಪಟ್ಟಿಯಲ್ಲಿ 68 ಮೈಲಿ ಎಂದು ಕೊಟ್ಟಿದೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ.

ಶ್ರೀ ಟಿ. ಮಾದಯ್ಯಗೌಡರು.—ರೀ-ಕ್ಲಾಸಿಫಿಕೇಷನ್ ಪ್ರಕಾರ ನಾಲ್ಕನೆಯ ಕ್ಲಾಸಿಗೆ 481 ಮೈಲಿ 3 ಫರ್ಲಾಂಗು ಎಂದು ಹೇಳಿದೆ. 20ನೆಯ ಪುಟದಲ್ಲಿ ತಮ್ಮ ಪಟ್ಟಿಯಲ್ಲಿ 63 ಮೈಲಿ ರಸ್ತೆ 4ನೆಯ ಕ್ಲಾಸಿಗೆ ಸೇರಿಸಿದೆ. ಅದು ಜಿಲ್ಲಾ ಬೋರ್ಡಿನ ಅಧೀನದಲ್ಲಿ ಈಗಿರುವುದರಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—221 ಮೈಲಿ ಐ. ವಿ. ಸಿ. ರಸ್ತೆಯಿದೆ. ಅದನ್ನು ಜಿಲ್ಲಾಬೋರ್ಡಿಗೆ ವರ್ಗಾಯಿಸಿದೆ. ಹಾಗೆ ಮಾಡುವಾಗ ಒಂದು ಪರತ್ತಿಗೆ ಒಳಪಡಿಸಿದೆ. ಎಗ್ಸಿಕ್ಯುಟಿವ್ ಇಂಜಿನಿಯರು ಮತ್ತು ಜಿಲ್ಲಾ ಬೋರ್ಡು ಪ್ರೆಸಿಡೆಂಟರು ಕಲೆತು ಯಾವ ಪ್ರಶ್ನೆ ತೆಗೆದುಕೊಳ್ಳಬೇಕು ಯಾವುದು ರಿಪೇರಿ ಮಾಡಿಕೊಡಬೇಕು ಎಂಬುದನ್ನು ತೀರ್ಮಾನಿಸಬೇಕು ಎಂದು ಹೇಳಿ ಆ ಕಂಡೀಷನ್‌ಗೆ ಒಳಪಡಿಸಿ 221 ಮೈಲಿಯನ್ನು ವರ್ಗಾಯಿಸಿದೆ.

ಶ್ರೀ ಟಿ. ಮಾದಯ್ಯಗೌಡರು.—ಜಿಲ್ಲಾ ಸಮಿತಿಯಲ್ಲಿ ಅವರು ಚುನಾಯಿಸಿ ಎಷ್ಟು ಮೈಲಿ ಐ. ವಿ. ಸಿ. ರಸ್ತೆಯನ್ನು 4ನೆಯ ಕ್ಲಾಸಿಗೆ ಸೇರಿಸಬೇಕೆಂದು ಗೊತ್ತು ಮಾಡಿದ್ದಾರೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್ ಬೇಕು ಸರ್. ಕಮಿಟಿಯ ರಿಪೋರ್ಟು ಇನ್ನೂ ನನ್ನ ಟೇಬಲ್ಲಿಗೆ ಬಂದಿಲ್ಲ.

ಶ್ರೀ ಟಿ. ಮಾದಯ್ಯಗೌಡರು.—ಅವರು ಕೇವಲ 68 ಮೈಲಿ ಮಾತ್ರ ಚುನಾಯಿಸಿಕೊಂಡಿದ್ದಾರೆ. ತಾವು

221 ಮೈಲಿಗೆ ಅವಕಾಶ ಮಾಡಿದರೂ ಸಮಿತಿಯವರು 68 ಮೈಲಿಯನ್ನು ಮಾತ್ರ 4ನೆಯ ಕ್ಲಾಸು ಮಾಡಬೇಕು, ಬಾಕಿಯಾದ್ದನ್ನು ಆ ಕ್ಲಾಸಿಗೆ ಸೇರಿಸುವುದಿಲ್ಲ ಎಂದು ನಿರ್ಧಾರ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಧಿಸೂಚನೆಯ ರ್ಲ್ಲಾಗಿ ಬಂದಿಲ್ಲ. ಐ. ಪಿ. ಸಿ. ರಸ್ತೆ ತೆಗೆದುಕೊಳ್ಳುವ ಉದ್ದೇಶ, ಅದನ್ನು ಉತ್ತಮಪಡಿಸಬೇಕೆಂಬುದೇ ಆಗಿದೆ. ಆದ್ದರಿಂದ ಈಗ 221 ಮೈಲಿಗಳನ್ನು ತೆಗೆದುಕೊಳ್ಳಲು ನಾವು ತಯಾರಾಗಿದ್ದೇವೆ. ಆದರೆ ಜಿಲ್ಲಾ ಬೋರ್ಡಿನ ಒಪ್ಪಿಗೆ ಅತಕ್ಕೆ ಅವಶ್ಯಕ. ಅವರನ್ನು ನಿರ್ಬಂಧಪಡಿಸುವುದಕ್ಕೆ ಸಾಧ್ಯವಿಲ್ಲ. ಅವರು ಶೇಕಡ 50 ಭಾಗ ಕೊಡುತ್ತಾರೆ. ನಾವು ಇನ್ನರ್ಧ ಕೊಡುತ್ತೇವೆ. ಯಾವುದಕ್ಕೂ ಅವರು ಒಪ್ಪಿಗೆ ಕೊಡಬೇಕು.

ಶ್ರೀ ಟಿ. ಮಾದಯ್ಯಗೌಡರು.—ಡಿಸ್ಟ್ರಿಕ್ಟ್ ಬೋರ್ಡು ರಸ್ತೆ ವಿಚಾರದಲ್ಲಿ ಬೆಂಗಳೂರು ಜಿಲ್ಲೆಯಲ್ಲಿರುವ ಎಲ್ಲಾ ಐ.ಪಿ.ಸಿ. ರಸ್ತೆಗಳನ್ನೂ 4ನೆಯ ಕ್ಲಾಸಿಗೆ ಸೇರಿಸಿ maintain ಮಾಡಬೇಕೆಂದು ಆರ್ಡರು ಮಾಡುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದನ್ನು ಒಪ್ಪುತ್ತೇನೆ. ಐ. ಪಿ. ಸಿ. ರಸ್ತೆಯನ್ನು ಜಿಲ್ಲಾ ಬೋರ್ಡು ಕೊಡುವುದಕ್ಕೆ ತಯಾರಾಗಿದ್ದರೆ ಸರ್ಕಾರ ಮೈಲಿಗೆ 50 ರೂಪಾಯಿ ಗ್ರ್ಯಾಂಟು ಕೊಡುವುದಕ್ಕೆ ತಯಾರಾಗಿದೆ. ಜಿಲ್ಲಾಬೋರ್ಡಿನ ಒಪ್ಪಿಗೆಯಂತೆ 221 ಮೈಲಿಗಳನ್ನು ವರ್ಗಾಯಿಸಿದೆ.

ಶ್ರೀ ಟಿ. ಮಾದಯ್ಯಗೌಡರು.—ಹಾಗಾದರೆ ಜಿಲ್ಲಾ ಬೋರ್ಡು ಒಪ್ಪುವುದನ್ನು ಮಾತ್ರ ರೀಕ್ಲಾಸಿಫಿಕೇಷನ್‌ಗೆ ತರುತ್ತೀರಾ ? ಅವರ ಒಪ್ಪಿಗೆಯಿಲ್ಲದಿದ್ದ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಏರ್ಪಾಡು ಮಾಡುವುದಿಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸಮಿತಿ ಒಪ್ಪಿದರೆ ನಾವು ವರ್ಗಾಯಿಸುತ್ತೇವೆ, ಇಲ್ಲದಿದ್ದರೆ ಸಾಧ್ಯವಿಲ್ಲ.

ಶ್ರೀ ಟಿ. ಮಾದಯ್ಯಗೌಡರು.—ಐ. ಪಿ. ಸಿ. ರಸ್ತೆ maintenanceಗೆ ಏನು ಏರ್ಪಾಡು ಮಾಡುತ್ತೀರಿ? ಜಿಲ್ಲಾಬೋರ್ಡು ಒಪ್ಪದಿದ್ದರೆ ಅವರಿಗೆ ಸಂಬಂಧಪಟ್ಟ ರಸ್ತೆಗಳನ್ನು ನೀವು ತೆಗೆದುಕೊಳ್ಳುವುದಿಲ್ಲವೆಂದು ಹೇಳುವಾಗ ಒಂದು ವೇಳೆ ಅವರು ಒಪ್ಪದಿದ್ದರ ಅಂಥ ಐ. ಪಿ. ಸಿ. ರಸ್ತೆಗಳ ಅಭಿವೃದ್ಧಿಗೆ ಏನು ಏರ್ಪಾಡು ಮಾಡಿದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸದ್ಯದಲ್ಲಿ ಏನೂ ಮಾಡಿಲ್ಲ. ಸಬ್ ಕಮಿಟಿಮಾಡಿ ಜಿಲ್ಲಾಬೋರ್ಡಿನ ಐ. ಪಿ. ಸಿ. ರಸ್ತೆ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ರಸ್ತೆಗಳನ್ನು ನೀವು ಒಂದು ಸ್ಕ್ಯಾಂಡರ್ಡಿಗೆ ತಂದು ನಮ್ಮ ವಶಕ್ಕೆ ಕೊಡಿ ಎಂದು ತಿಳಿಸಿದ್ದಾರೆ.

ಶ್ರೀ ಟಿ. ಮಾದಯ್ಯಗೌಡರು.—ಬೆಂಗಳೂರು ಜಿಲ್ಲಾ ಬೋರ್ಡಿ ಈ 68 ಮೈಲಿಯಲ್ಲದೆ ಹೆಚ್ಚಾಗಿ ರೀಕ್ಲಾಸಿಫಿಕೇಷನ್‌ಗೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂದು ಪ್ರೊಪೋಸ್ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ವಿಚಾರಮಾಡುತ್ತೇವೆ. ಅವರೂ ನಾವೂ ಚರ್ಚಿಸಿದ ಮೇಲೆ ಪ್ರಾಯಶಃ ರಿಪೋರ್ಟು ಮಾಡಿ ಒಂದು ಸ್ಕ್ಯಾಂಡರ್ಡಿಗೆ ತಂದುಕೊಡಿ ಎಂದು ಹೇಳಿದ್ದಾರೆ. ಅದನ್ನು ಗಮನದಲ್ಲಿಟ್ಟುಕೊಳ್ಳುವ ವ್ಯವಸ್ಥೆ ಮಾಡುತ್ತಿದೆ.

ಶ್ರೀ ಟಿ. ಮಾದಯ್ಯಗೌಡರು.—ಈ ಪಟ್ಟಿಯ ಪ್ರಕಾರ 4ನೆಯ ಕ್ಲಾಸಿಗೆ ಕೆಲವು ರಸ್ತೆಗಳನ್ನು ಸೇರಿಸಿದ್ದಾರೆ. ಅವು ಬಹಳ ದಿವಸದಿಂದ ಇರುವ ರಸ್ತೆಗಳು, ಬಹಳ ಪ್ರಾಮುಖ್ಯವಾದುವು. ಉದಾಹರಣೆಗೆ 19ನೆಯ ಪುಟವನ್ನು ನೋಡಿ. ತಮ್ಮ ಪಟ್ಟಿಯಲ್ಲಿ ಚನ್ನಪಟ್ಟಣ ತಾಲ್ಲೂಕಿನ 35, 38, 39ನೆಯ ನಂಬರು ರಸ್ತೆಗಳನ್ನು ತೆಗೆದುಕೊಂಡರೆ 38ನೆಯ ನಂಬರು ರಸ್ತೆ 9 ಮೈಲಿ 4ಫರ್ಲಾಂಗು ಚೆನ್ನಪಟ್ಟಣವಿದುಸಾಲ ರಸ್ತೆಯ ಮುಂದ್ಯ ಜಿಲ್ಲೆಯಲ್ಲಿ ಪೂರೈಸಿದೆ. ಆದರೆ ಚನ್ನಪಟ್ಟಣಕ್ಕೆ ಹೋಗುವ ದಾರಿ ಚೆನ್ನಾಗಿಲ್ಲ. ನುತ್ತಮುತ್ತಲಿನವರು ಅಲ್ಲಿಗೆ ಹೋಗಿ ಒರಲು ಅನುಕೂಲ ವಾಲದು. ಹಾಗಿರುವಾಗ ಆ ರಸ್ತೆಯನ್ನು ನಾಲ್ಕನೆಯ ದರ್ಜೆ ಮಾಡಿರುವುದನ್ನು ಎರಡನೆಯ ದರ್ಜೆಗೆ ತರಬೇಕಾಗಿತ್ತು. ಈಗ ನಾಲ್ಕನೆಯ ದರ್ಜೆಗೆ ಎಂಗಡಿಸಿರುವುದರ ಉದ್ದೇಶವೇನು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಬಹಳ ಮುಖ್ಯವಾದ ರಸ್ತೆ. ಈಚೆಗೆ ಒಂದು ಅಂದಾಜು ಮಂಜೂರಾಗಿರಬೇಕು. ಕರೆ ಮೇಲೆ ಹೋಗುವುದೆಂದು ಕಾಣುತ್ತದೆ. ಪಬ್ಲಿಕ್ ವರ್ಕ್ಸ್ ಇಲಾಖೆಯಿಂದ ಅದನ್ನು ಮಾಡಿಸಬೇಕೆಂದು ಪ್ರಾಯಶಃ ತೀರ್ಮಾನ ಮಾಡಿದ್ದೇವೆ. ಸರ್ಕಾರಿ ಆರ್ಡರಾದ ಮೇಲೆ ಅದು ಬೇರೆಯಾಗಿದೆ. ಪ್ರಾಯಶಃ ಅದು ಮೂರನೆಯ ಕ್ಲಾಸಿಗೆ ಸೇರಬಹುದು.

ಶ್ರೀ ಟಿ. ಮಾದಯ್ಯಗೌಡರು.—ಒಂದು ವೇಳೆ ಜಿಲ್ಲಾ ಬೋರ್ಡ್ ರಸ್ತೆಗಳನ್ನು 4ನೆಯ ಕ್ಲಾಸಿನಿಂದ 3ನೆಯ ಕ್ಲಾಸಿಗೆ ವರ್ಗಾಯಿಸಲು ಒಪ್ಪುವುದಿಲ್ಲವೆಂದು ಜಿಲ್ಲಾಬೋರ್ಡು ಹೇಳುವುದಾದರೆ ತಾವೇನು ಪರಿಹಾರ ಮಾಡುತ್ತೀರಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ ರಸ್ತೆಯನ್ನು ಪಬ್ಲಿಕ್ ವರ್ಕ್ಸ್ ಇಲಾಖೆಯವರು maintain ಮಾಡಬಹುದು; ಅದಕ್ಕೆ ಆಕ್ಷೇಪಣೆಯಿಲ್ಲ ಎಂದು ಹೇಳಿದ್ದಾರೆ.

ಶ್ರೀ ಟಿ. ಮಾದಯ್ಯಗೌಡರು.—ಚನ್ನಪಟ್ಟಣದಿಂದ ತಿಟ್ಟಮಾರನಹಳ್ಳಿ ಕಡೆ ನಡಸಾಲಿಗೆ ಹೋಗುತ್ತದೆ. ಅದು ಬಹಳ ಮುಖ್ಯವಾದ ರಸ್ತೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದನ್ನು ಬೇರೆ ತೆಗೆದುಕೊಂಡಿದ್ದೇವೆ.

ಶ್ರೀ ಟಿ. ಮಾದಯ್ಯಗೌಡರು.—ರೀ-ಕ್ಲಾಸಿಫಿಕೇಷನ್ ಅಂತ ಮಾಡಿದ್ದೀರಿ. ಆದ್ದರಿಂದ ಅದು ಒಂದು ಕ್ಲಾಸ್ ಅಲ್ಲದಿದ್ದರೆ ಇನ್ನೊಂದು ಕ್ಲಾಸ್‌ಗೆ ಬರಬೇಕಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಒಪ್ಪಿಕೊಳ್ಳುತ್ತೇನೆ. ಬರಬೇಕು. ಆ ಒಂದು ರಸ್ತೆ ವಿಚಾರ ಪರಿಶೀಲನೆಮಾಡಿ ಹೇಳುತ್ತೇನೆ.

ಶ್ರೀ ಟಿ. ಮಾದಯ್ಯಗೌಡರು.—ಆ ಒಂದು ರಸ್ತೆ ವಿಚಾರ ಅಲ್ಲ. ಸಾಮಾನ್ಯವಾದ ತತ್ವ ಹೇಳುತ್ತೇನೆ. ಯಾವದಾದರೂ ಒಂದು ರಸ್ತೆ IV ಕ್ಲಾಸ್‌ನಲ್ಲಿದ್ದರೆ II ಕ್ಲಾಸ್ ಗಾಗಲೀ III ಕ್ಲಾಸ್ ಗಾಗಲೀ ಬದಲಾವಣೆ ಮಾಡುವುದಕ್ಕೆ ಡಿಸ್ಟ್ರಿಕ್ಟ್ ಬೋರ್ಡಿನವರು ಒಪ್ಪದೇ ಇದ್ದರೂ ಅವಕಾಶವಿದೆಯೇ ಅಥವಾ ಅವರು ಒಪ್ಪಲೇ ಬೇಕೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಡಿಸ್ಟ್ರಿಕ್ಟ್ ಬೋರ್ಡಿನವರು ಒಪ್ಪಲೇ ಬೇಕು.

ಶ್ರೀ ಟಿ. ಮಾದಯ್ಯಗೌಡರು.—ಡಿಸ್ಟ್ರಿಕ್ಟ್ ಬೋರ್ಡಿನವರು ಒಪ್ಪದಿದ್ದರೆ ಈ ರಸ್ತೆಗಳನ್ನು ನಿರ್ಲಕ್ಷ್ಯಮಾಡುವುದಕ್ಕಾಗುವುದಿಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅವರಲ್ಲಿ ಇಬ್ಬರೂ ಭಾಗಿಗಳಾಗಿರುವುದರಿಂದ ಅವರು 50% ನಾವು 50% ಕೊಡಬೇಕು. ಅವರು ಒಪ್ಪದೇ ಹೋದಲ್ಲಿ ಅವರನ್ನು ಒಪ್ಪಿಸುವುದಕ್ಕೆ ಪ್ರಯತ್ನಮಾಡುತ್ತೇವೆ.

ಶ್ರೀ ಟಿ. ಮಾದಯ್ಯಗೌಡರು.—IV ಕ್ಲಾಸ್ ರಸ್ತೆಗಳಲ್ಲಿ ಪ್ರಾಮುಖ್ಯವಾದ ರಸ್ತೆಗಳನ್ನು III ಕ್ಲಾಸ್ ಆಗಿ ಒದಬಾವಣೆಮಾಡಿ ಅವುಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಸರ್ಕಾರವು ಪ್ರಯತ್ನಮಾಡುತ್ತಾರೆಯೇ; ಯೋಚನೆ ಮಾಡುತ್ತಾರೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಷ್ಟು ಪ್ರಯತ್ನ ಸರ್ಕಾರದವರು ಮಾಡಿರುವುದು ನೋಡಿದರೆ ಮೈಸೂರು ದೇಶದಲ್ಲಂತಕ್ಕ ರಸ್ತೆಗಳೆಲ್ಲಾ ಚೆನ್ನಾಗಿ ಆಗಬೇಕೆಂಬುದೆ ಸರಕಾರದವರ ಉದ್ದೇಶ. ಇದೇ ಸಭೆಯವರು ಒತ್ತಾಯ ಮಾಡಿದುದರ ಮೇರೆ ರಸ್ತೆಗಳು ಬಹಳ ಕೆಟ್ಟುಹೋಗಿ ಅಭಿವೃದ್ಧಿಮಾಡಬೇಕೆಂದು ರೀಕ್ಲಾಸಿಫಿಕೇಷನ್ ಸಮಿತಿಯವರು ತಿಳಿಸಿದ ಪ್ರಕಾರ ವರ್ಷ ವರ್ಷಕ್ಕೆ 16 ಲಕ್ಷ ರೂಪಾಯಿ ಜಾಸ್ತಿಕೊಡ ಬೇಕಾಗಿದೆ. ಡಿಸ್ಟ್ರಿಕ್ಟ್ ಬೋರ್ಡಿನವರು 3 ಲಕ್ಷ ರೂಪಾಯಿ ಕೊಡಬೇಕು. ಆದ್ದರಿಂದ ರೋಡ್ ಕ್ಲಾಸಿಫಿಕೇಷನ್ ಮಾಡಬೇಕಾದರೆ ಅವರ ಒಪ್ಪಿಗೆ ಬೇಕು. ಅವರ ವೇರೆ ಸಾಕಷ್ಟಿದ್ದು ಒತ್ತಾಯಿತಂದು III ಕ್ಲಾಸ್ ರಸ್ತೆಯಾಗಿ ಬದಲಾವಣೆ ಮಾಡಲಾಗಿದ್ದರೆ ಮಾಡುವುದಕ್ಕೆ ತಯಾರಾಗಿದ್ದೇವೆ.

ಶ್ರೀ ಟಿ. ಮಾದಯ್ಯಗೌಡರು.—ತಮ್ಮ ಸರ್ಕಾರಿ ಆಜ್ಞೆ 5ನೇ ಪ್ಯಾರಾದಲ್ಲಿ "The Chief Engineer will in consultation with the District Boards, select such portions of roads coming under classes II and III so as to restrict etc." ಎಂದು ಹೇಳಿದ್ದೀರಿ. ಚೀಫ್ ಇಂಜಿನಿಯರು ಡಿಸ್ಟ್ರಿಕ್ಟ್ ಬೋರ್ಡಿನವರನ್ನು ಕನ್ಸಲ್ಟ್ ಮಾಡಿ ಡಿಸ್ಟ್ರಿಕ್ಟ್ ಬೋರ್ಡಿನವರ ಆಡಳಿತದಲ್ಲಿರುವಂತಕ್ಕ ರಸ್ತೆಗಳಲ್ಲಿ ಯಾವ್ಯಾವ ಕ್ಲಾಸ್‌ಗೆ ಸೇರಿದ ರಸ್ತೆಗಳನ್ನು ತೆಗೆದುಕೊಳ್ಳಬೇಕಾದ್ದು ಅಗತ್ಯ ಎಂಬುದನ್ನು ಏನು ನಿರ್ಣಯಮಾಡಿದ್ದಾರೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಯೋಚನೆ ಮಾಡಿದ್ದಾರೆ. ಈ ವರ್ಷಕ್ಕೆ ಮಾತ್ರ ಅದು. ಏಕೆಂದರೆ ರೀಕ್ಲಾಸಿಫಿಕೇಷನ್ ಸಮಿತಿಯವರ ಪ್ರಪೋಸಲ್ ಸಂಪೂರ್ಣವಾಗಿ ಬಂದಿರಲಿಲ್ಲ ಮತ್ತು ಹಣದ ಅಭಾವ ಇತ್ತು. ಅದಕ್ಕೋಸ್ಕರವೇ ಈ ವರ್ಷಕ್ಕೆ ಮಾತ್ರ 13 ಲಕ್ಷ ರೂಪಾಯಿ ಪ್ರೊವೈಡ್ ಮಾಡಬೇಕಾಯಿತು. 16 ಲಕ್ಷ ರೂಪಾಯಿ ಪೂರ್ತಿಯಾಗಿ ಕೊಟ್ಟರೆ ಮುಂದಿನ ವರ್ಷ ಕೆಲವು ರಸ್ತೆಗಳಿಗೆ ಹೊಸದಾಗಿ ಗ್ರ್ಯಾಂಟು ಬರುತ್ತದೆ.

ಶ್ರೀ ಟಿ ಮಾದಯ್ಯಗೌಡರು.—ಈಗ ಸಬ್ ಕಮಿಟಿ ಮಾಡಿದ್ದೀರಿ. ಅವರು ವರದಿ ಕಳುಹಿಸಿದ ಮೇಲೆ ಯಾವ್ಯಾವ ಹಳ್ಳಿಯ ಇಂಟರ್‌ವೇಲೇಜ್ ಕಮ್ಯೂನಿಕೇಷನ್ ರಸ್ತೆಗಳನ್ನು ಅವರು ಸೇರಿಸಿದ್ದಾರೆ. ಅದನ್ನು ಯಾವ ಯಾವ ಕ್ಲಾಸ್‌ಗೆ ಸೇರಿಸಬೇಕಾಗಿತ್ತು ಎಂಬುದನ್ನು ಕೂಲಂಕಷವಾಗಿ ವಿಮರ್ಶೆಮಾಡಿ ಆ ಮೇಲೆ ಪುನಃ ಒಂದು ಕಟ್ಟಿ ತಯಾರುಮಾಡುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದರಲ್ಲಿ ಬಹಳ ಕೆಲಸ ಆಗಬೇಕಾಗಿದೆ. ಡಿಸ್ಟ್ರಿಕ್ಟ್ ಬೋರ್ಡಿನವರ ರಸ್ತೆಗಳೆಲ್ಲಾ ನಮ್ಮ ಕೈಗೆ ಸಂಪೂರ್ಣವಾಗಿ ಹ್ಯಾಂಡ್‌ಓವರ್ ಆಗುವವರೆಗೂ ಅವರ ಪ್ರಪೋಸಲ್ ಕೇಳಿಯೇತೀರಬೇಕು. ರಸ್ತೆಗಳನ್ನು ಉತ್ತಮಸ್ಥಿತಿಯಲ್ಲಡವ ಬಗ್ಗೆ, ಪ್ರಾಮುಖ್ಯವಾದ ರಸ್ತೆ ಜನ ತಿರುಗುತ್ತಾರೆ ಬಸ್ಸುಗಳು, ಲಾರಿಗಳ ತಿರುಗುತ್ತವೆ; ಅದ್ದರಿಂದ ಜಾಸ್ತಿ ಸಿಗಾಕೊಡಿ ಎಂದು ಹೇಳಿ ಸಾಧ್ಯವಾದಷ್ಟು ಮಾಡಿಸುವುದಕ್ಕೆ ಪ್ರಯತ್ನಮಾಡಬಹುದೇ ಹೊರತು ಯೂನಿಲ್ಯಾಟರಲ್ ಆಗಿ ಇಟ್ಟುಕೊಳ್ಳುವುದು ಆಗುವುದಿಲ್ಲ. ಅವರು ಒಪ್ಪುವುದಾದರೆ ಯಾವ ರಸ್ತೆ ಬೇಕಾದರೂ ತೆಗೆದುಕೊಳ್ಳುತ್ತೇವೆ; up-keep ಮಾಡುವುದಕ್ಕೆ ತಯಾರಾಗಿದ್ದೇವೆ.

ಶ್ರೀ ಟಿ. ಮಾದಯ್ಯಗೌಡರು.—ಬೆಂಗಳೂರು ಡಿಸ್ಟ್ರಿಕ್ಟ್‌ನಲ್ಲಿರತಕ್ಕ II ಕ್ಲಾಸ್ ರಸ್ತೆಗಳು ಬೇರೆ ಎಲ್ಲಾ ಡಿಸ್ಟ್ರಿಕ್ಟ್‌ಗಳಲ್ಲಿರತಕ್ಕ II ಕ್ಲಾಸ್ ರಸ್ತೆಗಳಿಗಿಂತಲೂ ಬಹಳ ಕಡಿಮೆ ಎಂಬುದು ಗೊತ್ತೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದನ್ನು ಹಾಗೆ judge ಮಾಡುವುದಕ್ಕಾಗುವುದಿಲ್ಲ. ಇಲ್ಲಿ ಟಾರು ರಸ್ತೆ, ಸಿಮೆಂಟ್ ಕಾಂಕ್ರೀಟ್ ರಸ್ತೆಗಳೂ ಇವೆ ಎಂಬುದನ್ನು ಯೋಚನೆಮಾಡಬೇಕು.

ಶ್ರೀ ಟಿ. ಮಾದಯ್ಯಗೌಡರು.—IV ಕ್ಲಾಸ್‌ನಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನ ಸಬ್ ಕಮಿಟಿಯವರು 68 ಮೈಲಿ ಮಾಡಿದ್ದಾರೆ ಎಂದು ಹೇಳಿದರಿ. ನೀವು ಉತ್ತರ ಓದಿದರುವುದರಲ್ಲಿ 221 ಮೈಲಿ ಇವೆ. ಇವೆ ರಡೂ ಸೇರಿ 289 ಮೈಲಿ ಆಯಿತು. ಅದರೆ ತಮ್ಮ ಪ್ರಕಾರ 4 0 ಚಿಲ್ಲರೆ ಹೇಗೆ ಬಂತು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—Total ಮಾಡಿದರೆ ಗೊತ್ತಾಗುತ್ತದೆ.

ಶ್ರೀ ಟಿ. ಮಾದಯ್ಯಗೌಡರು.—ಇದು ಸರಿಯಾಗಿಲ್ಲ. II ಕ್ಲಾಸ್ ರಸ್ತೆ ಇತರ ಎಲ್ಲಾ ಡಿಸ್ಟ್ರಿಕ್ಟ್‌ಗಳಿಗಿಂತಲೂ ಬೆಂಗಳೂರು ಡಿಸ್ಟ್ರಿಕ್ಟ್‌ನಲ್ಲಿ ಕಡಿಮೆ ಆಗಿದೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆದರೆ I ಕ್ಲಾಸ್ ರಸ್ತೆ ಜಾಸ್ತಿಯಾಗಿದೆ. ಅದು 295 ಮೈಲಿ ಇದೆ. ಟಾರ್ ರಸ್ತೆ, ಸಿಮೆಂಟ್ ಕಾಂಕ್ರೀಟ್ ರಸ್ತೆ ಇವೆಲ್ಲಾ ಇರುವುದರಿಂದ II ಕ್ಲಾಸ್ ರಸ್ತೆ ಕಮ್ಮಿ ಆಗಿದೆ ಅಷ್ಟೆ.

ಶ್ರೀ ಟಿ. ಮಾದಯ್ಯಗೌಡರು.—ಇತರ ಡಿಸ್ಟ್ರಿಕ್ಟ್‌ಗಳಲ್ಲಿ II ಕ್ಲಾಸ್ ರಸ್ತೆ ಹೆಚ್ಚಾಗಿದೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಲ್ಲಿ I ಕ್ಲಾಸ್ ರಸ್ತೆ ಕಮ್ಮಿ.

ಶ್ರೀ ಟಿ. ಮಾದಯ್ಯಗೌಡರು.—ತಾವು ರಚನೆಮಾಡಿರತಕ್ಕ ರೀಕ್ಲಾಸಿಫಿಕೇಷನ್ ಸಮಿತಿಯಲ್ಲಿ ಆಯಾಯಾ ಜಿಲ್ಲೆಯ ಜಿಲ್ಲಾಧಿಕಾರಿಗಳನ್ನು ಒಳಗೊಂಡು ಸಮಿತಿ ಮಾಡಿದ್ದೀರಿ. ಇದರಲ್ಲಿ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಸಮಿತಿ ಸದಸ್ಯರನ್ನು ಸೇರಿಸಿಕೊಂಡಿದ್ದರೆ ಹೆಚ್ಚಿನ ಉಪಯುಕ್ತವಾದ ಸಲಹೆಗಳು ದೊರೆಯುತ್ತಾ ಇರಲಿಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ, ನನಗೆ ತಿಳಿದಿರುವ ಹಾಗೆ—subject to correction—we have associated Deputy Commissioners of Districts, District Board Presidents, Executive Engineers and I think, also the Chairmen of the District Development Committees.

ಶ್ರೀ ಟಿ. ಮಾದಯ್ಯಗೌಡರು.—ರೋಡ್ ರೀಕ್ಲಾಸಿಫಿಕೇಷನ್ ವಿಚಾರದಲ್ಲಿ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಸಮಿತಿಯವರು ಏನಾದರೂ ಸಲಹೆ ಕಳುಹಿಸಿದರೆ ಪರ್ಯಾಲೋಚಿಸುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ರೀಕ್ಲಾಸಿಫಿಕೇಷನ್ ವಿಚಾರದಲ್ಲಿ ಸರ್ಕಾರ ಆಜ್ಞೆ ಆಗಿ ಬಿಡ್ಡೆಟ್‌ನಲ್ಲಿ 13 ಲಕ್ಷ ರೂಪಾಯಿ ಒದಗಿಸಿದ್ದೇವೆ. ಮುಂದಿನ ವರ್ಷದಿಂದ 16 ಲಕ್ಷ ರೂಪಾಯಿ ಒದಗಿಸಲಾಗುತ್ತದೆ. ಇಂಟರ್ ವಿಲೇಜ್ ಕಮ್ಯೂನಿಕೇಷನ್‌ಗೆ ಸಂಬಂಧಪಟ್ಟಂತೆ ಸಬ್‌ಕಮಿಟಿ ಮಾಡಿದೆ. ಅವರು ತಕ್ಷಣ ಮಾಡುವುದು ತೆಗೆದುಕೊಳ್ಳಬೇಕೆಂಬ ನಿಯಮ ಹಾಕುತ್ತಾರೋ ಅವರ ಮೇರೆ ಹೋಗುತ್ತದೆ.

ಶ್ರೀ ಟಿ. ಮಾದಯ್ಯಗೌಡರು.—I. V. C. ರಸ್ತೆ ವಿಚಾರದಲ್ಲಿ ಇನ್ನೂ ಸಬ್‌ಕಮಿಟಿಯಿಂದ ವರದಿಬಂದಿಲ್ಲ ಎಂದು ಹೇಳುತ್ತಿರಿ. ಈ ಸಂದರ್ಭದಲ್ಲಿ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕಮಿಟಿಯವರು ಈ ವಿಚಾರವನ್ನು ವಿಮರ್ಶೆಮಾಡಿ ಇಂತಿಂಥಾ IVನೇ ಕ್ಲಾಸ್ ಅಥವಾ III‌ನೇ ಕ್ಲಾಸ್ ಅಥವಾ II‌ನೇ ಕ್ಲಾಸ್ ರಸ್ತೆಗಳನ್ನು ತೆಗೆದುಕೊಳ್ಳಿ ಎಂಬುದಾಗಿ ಸಲಹೆ ಕೊಟ್ಟಿರೆ, ಅವುಗಳನ್ನು ತೆಗೆದುಕೊಳ್ಳುವುದಕ್ಕೆ ಆರ್ಡರ್ ಮಾಡುತ್ತೀರಾ?

The Hon'ble Sri T. MARIAPPA — I have to consider.

ಶ್ರೀ ಟಿ. ಮಾದಯ್ಯಗೌಡರು.—ಈ ಸರ್ಕಾರಿ ಆಜ್ಞೆಯಲ್ಲಿರುವ "Levy of establishment and tools and plant charges" ವಿಚಾರದಲ್ಲಿ ಸರ್ಕಾರದವರು ತೀವ್ರಾಸಕ್ತಿಯಿಂದ ಯೋಚನೆಮಾಡಿ ಯಾವ್ಯಾರು ಪರಿಹಾರಕೊಡಬೇಕೆಂದು ಕೇಳಿಕೊಂಡಿದ್ದಾರೋ, ಅವರಿಗೆ ಪರಿಹಾರ ಕೊಡಲಾಗುತ್ತಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು, ಅದು ಪರ್ಯಾಲೋಚನೆಯಲ್ಲಿದೆ.

ಶ್ರೀ ಎಂ. ಎ. ಕೃಷ್ಣಪ್ಪನವರು (ಕೋಲಾರ ಜಿಲ್ಲೆ) — ಇತರ ಸಂಸ್ಥಾನಗಳಲ್ಲಿ ನ್ಯಾಷನಲ್ ಹೈವೇಸ್ ಕ್ಲಾಸಿಫಿಕೇಷನ್ ಇರುವುದು ಗೊತ್ತೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಗೊತ್ತು. ಆ ರೀತಿ ಇದೆ.

ಶ್ರೀ ಎಂ. ಎ. ಕೃಷ್ಣಪ್ಪನವರು.—ಮೈಸೂರು ಸಂಸ್ಥಾನದಲ್ಲಿ ನ್ಯಾಷನಲ್ ಹೈವೇಸ್ ಎಂಬುದಾಗಿ ಇಲ್ಲ ಅಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕ್ಲಾಸ್ Iನಲ್ಲೇ ಆದು ಬರುತ್ತದೆ.

ಶ್ರೀ ಎಂ. ಎ. ಕೃಷ್ಣಪ್ಪನವರು.—ಕ್ಲಾಸ್ I ರಸ್ತೆಗೂ ನ್ಯಾಷನಲ್ ಹೈವೇಸ್ ಎಂಬುದಕ್ಕೂ ಬಹಳ ವ್ಯತ್ಯಾಸವಿದೆಯಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಜಗಜಾಂತರ ವ್ಯತ್ಯಾಸವಿದೆ. ಅದಕ್ಕೆ 3,000 ರೂಪಾಯಿಗಳ ಮೇರೆ ಖರ್ಚುಮಾಡುತ್ತಾರೆ. ಇದಕ್ಕೆ 1,000 ರೂಪಾಯಿ ಮಾತ್ರ ಆಗುತ್ತದೆ.

ಶ್ರೀ ಎಂ. ಎ. ಕೃಷ್ಣಪ್ಪನವರು —ರಾಷ್ಟ್ರೀಯ ದೃಷ್ಟಿಯಿಂದ ಅವುಗಳನ್ನು ನ್ಯಾಷನಲ್ ಹೈವೇಸ್ ಆಗಿ ಬದಲಾಯಿಸಬೇಕೆಂಬ ವಿಷಯ ಸರ್ಕಾರದವರ ಗಮನದಲ್ಲಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು —ತೀವ್ರವಾಗಿ ಪರ್ಯಾಲೋಚಿಸುತ್ತಾ ಇದ್ದಾರೆ. ಫೈನಾನ್ಷಿಯರ್ ಇಂಟಿಗ್ರೇಷನ್ ಆಗುವಾಗ ಈ ಪ್ರಶ್ನೆ ಬಂದು ದೇಶದ ಹಿತದೃಷ್ಟಿಯಿಂದ ಸ್ವಲ್ಪಕಾಲ ನಮ್ಮ ರಸ್ತೆಗಳನ್ನು ಹೀಗೆಯೇ ಇಟ್ಟುಕೊಂಡಿರುವುದು ಉತ್ತಮ, ನ್ಯಾಷನಲ್ ಹೈವೇಸ್ ಆಗಿ ಬದಲಾವಣೆ ಮಾಡಿದರೆ ಬಹಳ ಹೆಚ್ಚಿನ ಖರ್ಚು ಆಗುತ್ತದೆ ಎಂದು ಅಭಿಪ್ರಾಯಪಡಲಾಗಿತ್ತು; ಈಗ ತಾವು ಆ ಪ್ರಶ್ನೆ ಎತ್ತಿರುವುದರಿಂದ ಪುನಃ ಆಲೋಚನೆಮಾಡುತ್ತೇವೆಂದು ಹೇಳುತ್ತೇನೆ.

ಶ್ರೀ ಎಸ್. ಕರಿಯಪ್ಪನವರು (ಬೆಂಗಳೂರು ಜಿಲ್ಲೆ) — ಎಂದ ಇದ್ದ ಮೈಸೂರು-ಬೆಂಗಳೂರು ರಸ್ತೆಯ ಉದ್ದ ಎಷ್ಟು?

The Hon'ble Sri T. MARIAPPA.— He is testing my memory; it may be 86 *via* Ramanagaram.

ಶ್ರೀ ಎಸ್. ಕರಿಯಪ್ಪನವರು.—ಈಗ ತಾವು ಫಸ್ಟ್‌ಕ್ಲಾಸ್ ರಸ್ತೆಗಳಾಗಿ ಎಷ್ಟು ಮೈಲಿ ರಸ್ತೆಗಳನ್ನು ಬದಲಾವಣೆಮಾಡಿದ್ದೀರಿ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ನೋಟೀಸ್ ಬೇಕು.

ಶ್ರೀ ಎಸ್. ಕರಿಯಪ್ಪನವರು.— 63 ಮೈಲಿಗಳನ್ನು ಮಾತ್ರ ಬದಲಾವಣೆಮಾಡಿದ್ದೀರಿ. ಉಳಿದಿದ್ದನ್ನೇಕೆ ಮಾಡಲಿಲ್ಲ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—I want notice, because it relates to different districts. ಅವರು ಹೇಳಿದಹಾಗೆ ಬೆಂಗಳೂರು ಡಿಸ್ಟ್ರಿಕ್ಟಿನದು ಮಾತ್ರ ಇದೆ. ಬೆಂಗಳೂರು ಡಿಸ್ಟ್ರಿಕ್ಟಿಗೆ ಸೇರಿದ್ದನ್ನು ಬೆಂಗಳೂರಿಗೆ ಹಾಕಿದ್ದಾರೆ, ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ್ದನ್ನು ಮೈಸೂರಿಗೆ ಹಾಕಿದ್ದಾರೆಂದು ಕಾಣುತ್ತೆ.

ಶ್ರೀ ಎಸ್. ಕರಿಯಪ್ಪನವರು.—ಫಾರೆಸ್ಟ್ ರಸ್ತೆಗಳನ್ನೇಕೆ ಇದರಲ್ಲಿ ಸೇರಿಸಲಿಲ್ಲ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅವನ್ನು ಆರಿಸಿಕೊಳ್ಳುವುದು ಕಷ್ಟ. ಆದರೂ ಅಲ್ಲಿ ರಸ್ತೆಗಳು ಮುಖ್ಯವಾದವುದಾದರೂ ಇದ್ದು ತೀರ ಕೆಟ್ಟುಹೋಗಿದೆಯೆಂಬುದನ್ನು ನಮ್ಮ ಗಮನಕ್ಕೆ ಬಂದರೆ ಸಾಧ್ಯವಾದಷ್ಟುವಟ್ಟಿಗೆ ಅಂಥ forest ರಸ್ತೆಗಳನ್ನೂ ಮಾಡಬೇಕೆಂದಿದ್ದೇವೆ.

ಶ್ರೀ ಎಸ್. ಕರಿಯಪ್ಪನವರು.— ಈ ರಸ್ತೆಗಳು ಕೆಟ್ಟು ಹೋಗಿರುವುದನ್ನು ರಿಪೇರಿಮಾಡುವ ಬಗ್ಗೆ ಏನಾದರೂ ಸ್ಪೆಷಲ್ ಗ್ರಾಂಟ್ ಕೊಡುವ ಏರ್ಪಾಡು ಮಾಡಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು. ಡಿಸ್ಟ್ರಿಕ್ಟ್‌ಬೋರ್ಡಿನವರೂ ನಾವೂ ಇದರ ಬಗ್ಗೆ 50 : 50 ಭಾಗ ಕೊಡುವುದೆಂದಿದೆ. We are joint partners in this.

ಶ್ರೀ ಎಸ್. ಕರಿಯಪ್ಪನವರು.—ಇಲ್ಲಿ ಯಾವ ರಸ್ತೆಗಳೂ 4 ನೆಯ ಕ್ಲಾಸಿನಿಂದ ಕೆಳಗಿಳಿಯುವುದಿಲ್ಲ ತಾನೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಳಿಯಕೂಡದೆಂಬುದು ನಮ್ಮ ಅಭಿಪ್ರಾಯ.

ಶ್ರೀ ಎಸ್. ಕರಿಯಪ್ಪನವರು.— ಈ ರಸ್ತೆಗಳಿಗಾಗಿ ಮೊದಲು ಎಷ್ಟು ಹಣ ಕೊಡುತ್ತಿತ್ತು; ಈಗ ಎಷ್ಟು ಗೊತ್ತುಮಾಡಿದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮೊದಲು ಸರ್ಕಾರದವರು ಕ್ಲಾಸಿಫಿಕೇಷನ್‌ಮಾಡಿದ್ದಕ್ಕೂ ಈಗ ಮಾಡಿರುವುದಕ್ಕೂ ವ್ಯತ್ಯಾಸವಿದೆ. ಏಕೆಂದರೆ ಈಚೀಚೆಗೆ ಬಹಳ ಮುಖ್ಯವಾಗಿ ಲಲ್ಲಿ ಟ್ರಾಫಿಕ್ ಬಹಳ ಜಾಸ್ತಿಯಾಗಿದೆ. ಆದರಿಂದ ಆ ರಸ್ತೆಗಳನ್ನು ಉತ್ತಮಪಡಿಸಬೇಕಾದ ಆವಶ್ಯಕತೆ ಬಂದಿದೆ. ಮೊದಲು ಸರ್ಕಾರದವರು ಈ ರಸ್ತೆಗಳಿಗಾಗಿ ಮುಖ್ಯ ಮಾರ್ಕೆಟಿಂಗ್ ರಸ್ತೆಗಳಿಗಾಗಿ 14 ಲಕ್ಷ ಚಿಲ್ಲರೆ ಖರ್ಚುಮಾಡುತ್ತಿದ್ದರು. ಅಂಥಾದ್ದನ್ನೀಗ 30 ಲಕ್ಷ ಚಿಲ್ಲರೆಯಷ್ಟಕ್ಕೆ ಜಾಸ್ತಿಮಾಡಿದ್ದೇವೆ. ಡಿಸ್ಟ್ರಿಕ್ಟ್ ಬೋರ್ಡಿನವರು 7 ಲಕ್ಷ ಚಿಲ್ಲರೆ ಕೊಡುತ್ತಿದ್ದುದನ್ನು 11 ಲಕ್ಷ ಚಿಲ್ಲರೆಗೆ ಹೆಚ್ಚಿಸಿದ್ದಾರೆ. ಒಟ್ಟಿನಲ್ಲಿ ಸರ್ಕಾರದವರು ಸುಮಾರು 16 ಲಕ್ಷ ಡಿಸ್ಟ್ರಿಕ್ಟ್ ಬೋರ್ಡಿನವರು 3 ಲಕ್ಷ ಜಾಸ್ತಿ ಕೊಟ್ಟಿದ್ದಾರೆ. ಆದ್ದರಿಂದಲೇ ನಾವೀಗ ಸ್ವಲ್ಪ ಹೆಚ್ಚಿಗೆ ಮೈಲೇಜ್ ಗ್ರಾಂಟನ್ನು ಕೊಡುವುದಕ್ಕೂ ಸಾಧ್ಯವಾಗಿದೆ. ಕೆಲವಕ್ಕೆ 100—200 ರೂಪಾಯಿಗಳವರೆಗೂ ಕೊಟ್ಟಿದ್ದೇವೆ. ಇನ್ನು ಕೆಲವು ಸಂದರ್ಭಗಳಲ್ಲಿ ಒಂದಕ್ಕೆರಡರಷ್ಟು ಜಾಸ್ತಿಮಾಡಿರುವುದೂ ಉಂಟು.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಈ ರೋಡ್-ರಿ-ಕ್ಲಾಸಿಫಿಕೇಷನ್ ಆರ್ಡರು ಯಾವಾಗ ಸಾದರವಾಯಿತು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—18ನೇ ಆಗಸ್ಟ್ 1951 ರಲ್ಲಿ ಆರ್ಡರಾಯಿತು; ಅದರ ಪ್ರತಿಗಳನ್ನು ಕಳೆದ ಅಕ್ಟೋಬರ್ 18 ರಲ್ಲಿ ಹಂಚಲಾಗಿದೆ.

ಶ್ರೀ ಎಸ್. ರಂಗರಾಮಯ್ಯನವರು.—4 ನೆಯ ಕ್ಲಾಸಿನ ರಸ್ತೆಗೆ ತಾವು ಕೊಡುವ ನೂರು ರೂಪಾಯಿಗಳು ಬಹಳ ಕಡಿಮೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಏನೂ ಇಲ್ಲದೆ ಇದ್ದ ಸ್ಥಿತಿ ಇತ್ತು. ಈಗ 100 ರೂಪಾಯಿಯನ್ನಾದರೂ ಕೊಟ್ಟು ಅವರು ಅವಶ್ಯವಾಗಿ maintain ಮಾಡಿಕೊಳ್ಳಲೆಂಬ ಅಭಿಪ್ರಾಯದಿಂದ ಮಾಡಿದ್ದೇವೆ.

ಶ್ರೀ ಎಸ್. ರಂಗರಾಮಯ್ಯನವರು.—ಈ ನೂರು ರೂಪಾಯಿಗಳನ್ನು ಕೊಡುವುದು ಆ ರಸ್ತೆಯ maintenanceಗೆ ತಾನೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು; ರಿಪೇರಿಗಾಗಿಯೆ !

ಶ್ರೀ ಎಸ್. ರಂಗರಾಮಯ್ಯನವರು.—ಟಾರ್ ರಸ್ತೆಯನ್ನೂ ಸಿಮೆಂಟ್ ಕಾಂಕ್ರೀಟ್ ರಸ್ತೆಯನ್ನೂ ಯಾವ ಕ್ಲಾಸಿಗೆ ಸೇರಿಸಿದ್ದೀರಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಫಸ್ಟ್‌ಕ್ಲಾಸ್ ನಲ್ಲಿ.

ಶ್ರೀ ಎಸ್. ರಂಗರಾಮಯ್ಯನವರು.—ಅವುಗಳಿಗೆಷ್ಟು ಗ್ರಾಂಟ್ ಕೊಡುತ್ತೀರಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸಿಮೆಂಟ್ ಕಾಂಕ್ರೀಟ್ ರಸ್ತೆಗಳಿಗೆ 100 ರೂಪಾಯಿನಿಂದ 200 ರೂಪಾಯಿವರೆಗೆ ಕೊಡುತ್ತೇವೆ. ಅದಕ್ಕೆ ಪಕ್ಕಗಳಲ್ಲಿ ಜಲ್ಲಿ ಕಲ್ಲು ಮಾತ್ರ ಹಾಕಬೇಕಾಗುತ್ತದೆ. ಟಾರ್ ರೋಡಿಗೆ 450 ರೂಪಾಯಿಗಳಿಂದ 500 ರೂಪಾಯಿಗಳವರೆಗೂ ಕೊಡುತ್ತೇವೆ.

ಶ್ರೀ ಎಸ್. ರಂಗರಾಮಯ್ಯನವರು.—ಮೈಸೂರು ಡಿಸ್ಟ್ರಿಕ್ಟ್‌ನಲ್ಲಿ I.V. C. ರಸ್ತೆಗಳನ್ನು ಎಷ್ಟು ಕೆಗದು ಕೊಂಡಿದ್ದೀರಿ ?

The Hon'ble Sri T. MARIAPPA.—I want notice. The whole thing is given in the list. Every Hon'ble Member is in receipt of that list.

ಶ್ರೀ ಎಸ್. ರಂಗರಾಮಯ್ಯನವರು.—I. V. C. ರಸ್ತೆಗಳನ್ನು ಬದಲಾವಣೆಮಾಡುವ ವಿಚಾರದಲ್ಲಿ ನೀವು ಏರ್ಪಡಿಸಿದ್ದ ಸಬ್ ಕಮಿಟಿಗಳವರು ವರದಿ ಕಳುಹಿಸಿ ಕೊಟ್ಟಿದ್ದಾರೆಯೆ ? ಎಲ್ಲಾ ಡಿಸ್ಟ್ರಿಕ್ಟ್‌ಗಳಿಂದಲೂ ಬಂದಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನನ್ನ ಕೈಗಿನ್ನೂ ಬಂದಿಲ್ಲ. ಪ್ರಾಯಶಃ ಸೆಕ್ರೆಟೆರಿಯಟ್ಟಿಗೆ ಬಂದಿರಬಹುದು.

ಶ್ರೀ ಎಸ್. ರಂಗರಾಮಯ್ಯನವರು.—ಬಂದ ಕೂಡ್ಲೆ ಅವರ ಶಿಫಾರಸುಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನಪಡುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಗತ್ಯವಾಗಿ, ಅದಷ್ಟು ಬೇಗನೆ; ಆ ಶಿಫಾರಸುಗಳನ್ನು ಪರಿಶೀಲನೆ ಮಾಡಿ ಜಾರಿಗೆ ಕೊಡುವುದಕ್ಕೆ ಸಿದ್ಧವಾಗಿದ್ದೇವೆ.

Introduction of Visual Education Scheme.

Q.—37. **Sri H. C. LINGA REDDY** (Kolar District—General).—

Will the Government be pleased to state :—

(*a*) whether they are contemplating the introduction of a scheme of visual education in State;

(*b*) the detail of the scheme;

(*c*) whether they introduce the scheme in all parts in the State ?

A.—**The Hon'ble Sri R CHENNIGARAMIAH** (Minister for Local Self-Government).—

(*a*) Yes.

(*b*) There are 18 Visual Education Centres. Seventeen of them are in Government High Schools, the 18th being in the Vidyanagar Basic Training Centre. The last named centre has a mobile unit. There are now 111 films. An indent to buy another 90 films has been made through the Stores Purchase Committee.

The total budget for the scheme for the year 1951-52 is Rs. 52,360. This includes the amount set apart for buying 100 films every year. Except for the increase in the number of films as noted above, further extension of the scheme is deferred in view of financial stringency.

Levy of fees.—Twelve annas per year per pupil in Middle Schools. Rs. 1-8-0 per year per pupil in High Schools.

This is in respect of all pupils who come under the scheme.

The 18 centres serve 150 High Schools and nearly 45,000 pupils.

Last year the money realised by way of fees was Rs. 26,500. That was for the latter half of the year for which the fees were collected as the scheme was started very late.

This year Rs. 54,000 is expected from the visual education fees.

Number of shows.—There will be two shows every evening for five days in the week. Further expansion of the scheme depends upon the funds available.

(*c*) Yes, as far as funds permit.